ಎಂ ವಿ ಸಿ. 598/2023 ಪಿಡಬ್ಲೂಃ 1- ರಘು ಆರ್.

ದಿನಾಂಕಃ 17.09.2024 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ಎ.ಪಿ.ಎನ್. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ಧು, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಸಾಕ್ಷಿಗೆ ಬೆಂಬಲಿತವಾಗಿ ಪ್ರಥಮ ವರ್ತಮಾನ ದೃಢೀಕೃತ ನಕಲು ಪ್ರತಿಯನ್ನು ನಿಪಿಃ1 ಎಂದು, ದೂರಿನ ದೃಢೀಕೃತ ನಕಲನ್ನು ನಿಪಿಃ2 ಎಂದು, ಪಂಚನಾಮೆಯ ದೃಢೀಕೃತ ನಕಲನ್ನು ನಿಪಿ 3 ಎಂದು, ಕಚ್ಚಾ ನಕಾಶೆಯ ದೃಢೀಕೃತ ನಕಲನ್ನು ನಿಪಿ 4 ಎಂದು, ಮೋಟಾರ್ ವಾಹನ ಅಪಘಾತ ವರದಿಯನ್ನು ನಿಪಿಃ5 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ 6 ಎಂದು, ಚಾರ್ಜ್ ಶೀಟ್ ನ ದೃಢೀಕೃತ ನಕಲನ್ನು ನಿಪಿ 7 ಎಂದು, ನನ್ನ ಆಧಾರ್ ಕಾರ್ಡಿನ ದೃಢೀಕೃತ ನಕಲನ್ನು ನಿಪಿ 8 ಎಂದು ಗುರುತಿಸಲಾಗಿದೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಗಿದೆ.**

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.